


**ಜರ್ಮನಿಯ 1991ರ 500ರ ಡಚ್ ಮಾರ್ಕ್ ನೋಟಿನಲ್ಲಿ ಮೆರಿಯನ್ನಳ ಭಾವಚಿತ್ರ ಹಾಗೂ ಆಕೆ ರಚಿಸಿದ ಚಿತ್ರಗಳು**

ಜೀವಂತ ಇರುವಾಗಲೇ ಆಕೆಯ ಕೊಡುಗೆಯನ್ನು ಗುರುತಿಸಿ ಗೌರವಿಸಿದರೂ ಅಂದಿನ ಪುರುಷ ವಿಜ್ಞಾನಿಗಳು ಮೆರಿಯನ್‌ಳ ಕೊಡುಗೆಯನ್ನು ಅಲ್ಲಗಳೆದರು. ಚಿತ್ರಗಳಲ್ಲಿನ ಕೆಲವು ನ್ಯೂನತೆಗಳನ್ನು ದೊಡ್ಡದು ಮಾಡಿ ಅಪಹಾಸ್ಯ ಮಾಡಿದರು. ಸುರಿನಾಮೆಯ ಅಧ್ಯಯನದಿಂದ ರಚಿಸಿದ್ದ ಚಿತ್ರಗಳ ಕೃತಿ ಪ್ರಕಟವಾದಾಗ ಅದರಲ್ಲಿ ಟ್ಯಾರಂಟುಲ ಎಂಬ ದೈತ್ಯ ಜೇಡ ಹಮ್ಮಿಂಗ್ ಬರ್ಡ್ ಪಕ್ಷಿಯನ್ನು ತಿನ್ನುತ್ತಿರುವ ಚಿತ್ರವೊಂದಿತ್ತು. ಆಗ ಅದರ ಬಗ್ಗೆ ಯಾರೂ ಪ್ರತಿಕ್ರಿಯಿಸಲಿಲ್ಲ. ಆದರೆ, ಒಂದು ಶತಮಾನ ಕಳೆದ ನಂತರ ಪಕ್ಷಿ ತಿನ್ನುವ ಜೇಡ ಇಲ್ಲವೇ ಇಲ್ಲ ಎಂದು ಲ್ಯಾನ್ಸ್‌ಡೌನ್ ಗಿಲ್ಡಿಂಗ್ ಮುಂತಾದವರು ವಾದಿಸಿದರು. ಜೇಡ ಪಕ್ಷಿಯನ್ನು ಕಚ್ಚಿ ತಿನ್ನುವುದು ಸಾಧ್ಯವೇ? ಎಂದು ಅಪಹಾಸ್ಯ ಮಾಡಿದರು. ಆ ಚಿತ್ರದಲ್ಲಿ ಕೆಂಜಿಗ ಇರುವೆಗಳು ಒಂದು ಮತ್ತೊಂದನ್ನು ಕಚ್ಚಿ ಹಿಡಿದು ತಮ್ಮ ದೇಹವನ್ನೇ ಸೇತುವೆಯಾಗಿಸುವ ಚಿತ್ರವೂ ಇತ್ತು. ಅದೂ ಪ್ರಕೃತಿಯಲ್ಲಿ ಸಾಧ್ಯವೇ ಇಲ್ಲ ಎಂದು ವಾದಿಸಿದರು. ಅವರ ಅಪಹಾಸ್ಯಕ್ಕೆ ಆಕೆ ಹೆಣ್ಣೆಂಬುದೂ ಕಾರಣವಾಗಿತ್ತು.

ಚಾರ್ಲ್ಸ್ ಡಾರ್ವಿನ್ ಗೆಳೆಯ ಹೆನ್ರಿ ವಾಲ್ಟರ್ ಬೇಟ್ಸ್ 1863ರಲ್ಲಿ ಟ್ಯಾರಂಟುಲ ಜೇಡ ಪಕ್ಷಿಗಳನ್ನು ತಿನ್ನುವುದನ್ನು ನೋಡಿ ಮೆರಿಯನ್‌ಳ ಅಧ್ಯಯನ ಹಾಗೂ ಚಿತ್ರದಲ್ಲಿ ಸತ್ಯವಿದೆ ಎಂಬುದನ್ನು ತನ್ನ ಕೃತಿ ‘ಅಮೆಜಾನ್’ನಲ್ಲಿ ದಾಖಲಿಸಿದ (ಆಕೆಯ ಗೌರವಾರ್ಥ ಆ ಜೇಡ ಪ್ರಭೇದಕ್ಕೆ ‘ಅವಿಕ್ಯುಲೇರಿಯ ಮೆರಿಯಾನೆ’ ಎಂದು ಆಕೆಯ ಹೆಸರನ್ನೇ ಇಡಲಾಗಿದೆ). ಕೆಂಜಿಗಗಳು ತಮ್ಮ ದೇಹವನ್ನೇ ಸೇತುವೆಯನ್ನಾಗಿಸಿಕೊಳ್ಳುವುದು ಇಂದು ಎಲ್ಲರಿಗೂ ತಿಳಿದ ವಿಷಯ. ಆಕೆ ಎಲೆ ಕತ್ತರಿಸುವ ಇರುವೆಗಳು ಎಲೆಗಳನ್ನು ಕತ್ತರಿಸಿ ಭೂಮಿಯೊಳಗಿನ ತನ್ನ ಗೂಡಿಗೆ ಕೊಂಡೊಯ್ಯುವುದನ್ನು ನೋಡಿ ಅದನ್ನು ದಾಖಲಿಸಿ, ಅವು ತಮ್ಮ ಇರುವೆಗಳಿಗೆ ಎಲೆಗಳನ್ನು ಆಹಾರವಾಗಿ ಕೊಂಡೊಯ್ಯುತ್ತವೆ ಎಂದು ದಾಖಲಿಸಿದ್ದಳು. ಇರುವೆಗಳು ಎಲೆಗಳನ್ನು ಕತ್ತರಿಸಿ ಗೂಡಿಗೆ ಕೊಂಡೊಯ್ಯುವುದು ನಿಜ; ಆದರೆ ಆ ಕ್ಷಣದ ಆಹಾರವಾಗಿ ಅಲ್ಲ, ಬದಲಿಗೆ ಅದನ್ನು ಶಿಲೀಂಧ್ರ ಬಳಸಿ ‘ಕೃಷಿ’ ಮಾಡಿ ನಂತರ ಇರುವೆಗಳ ಮರಿಗಳಾದ ಲಾರ್ವಾಗಳಿಗೆ ಆಹಾರವಾಗಿ ಬಳಸುತ್ತವೆ ಎನ್ನುವುದನ್ನು ನಂತರ ವಿಜ್ಞಾನಿಗಳು ಕಂಡುಕೊಂಡರು.

ಮೆರಿಯನ್ ಮಾತ್ರವೇ ಇಂದಿಗೂ ಸುರಿನಾಮೆಯ ಕೆಲವು ಕೀಟಪ್ರಭೇದಗಳ ರೂಪಾಂತರ ಪ್ರಕ್ರಿಯೆಯನ್ನು ಅಧ್ಯಯನ ಮಾಡಿರುವುದು ಎನ್ನಲಾಗುತ್ತದೆ. ಆದರೆ ಅಧ್ಯಯನದಲ್ಲಿ, ಅದರಲ್ಲೂ ಶೈಕ್ಷಣಿಕ ಅಥವಾ ವೈಜ್ಞಾನಿಕ ಹಿನ್ನೆಲೆಯಿಲ್ಲದ ವ್ಯಕ್ತಿಯೊಬ್ಬರು ಬರಿಗಣ್ಣಿನಿಂದ ವೀಕ್ಷಿಸಿ, ದಾಖಲೆ ಮಾಡುವಾಗ ಕೆಲವು ಸಣ್ಣ ಸಣ್ಣ ತಪ್ಪು ದಾಖಲೆ ಹಾಗೂ ಉಲ್ಲೇಖಗಳಾಗಿರುವುದುಂಟು. ಅದಕ್ಕೆ ಕಾರಣ ಆಕೆ ಅನಾರೋಗ್ಯದಿಂದ ಸುರಿನಾಮೆಯಿಂದ ಹಿಂದಿರುಗಿದ ನಂತರ ತನ್ನ ಕೃತಿಯನ್ನು ಆಮ್‌ಸ್ಟರ್‌ಡ್ಯಾಂನಲ್ಲಿ ಪೂರ್ಣಗೊಳಿಸಿದಳು. ಚಿತ್ರಗಳಿಗೆ ಆಕೆಯ ಹೆಣ್ಣುಮಕ್ಕಳು ಸಹ ಬಣ್ಣ ಹಚ್ಚಿ ಪೂರ್ಣಗೊಳಿಸುವಲ್ಲಿ ಸಹಾಯ ಮಾಡಿರುವುದು. ಡಾ. ಎಥರಿಡ್ಜ್ ಎಂಬ ವಿಜ್ಞಾನಿ ಆಕೆಯ ಚಿತ್ರಗಳಲ್ಲಿ ಬಹಳಷ್ಟು ತಪ್ಪುಗಳಿವೆ ಎನ್ನುವ ಹಲವರ ವಾದವನ್ನು ತಿರಸ್ಕರಿಸಿ, ಚಾರ್ಲ್ಸ್ ಡಾರ್ವಿನ್ ಮತ್ತು ಐಸಾಕ್ ನ್ಯೂಟನ್‌ರವರ ಪ್ರಕಟಿತ ಕೃತಿಗಳಲ್ಲಿಯೂ ತಪ್ಪುಗಳಿವೆ, ವಿಜ್ಞಾನದ ಅಧ್ಯಯನದಲ್ಲಿ ಅಂಥ ತಪ್ಪು ಸಾಮಾನ್ಯ ಎಂದು ವಾದಿಸಿದರು.

## ವಿಶಿಷ್ಟ ಹಾಗೂ ನಿಖರ ಚಿತ್ರಕಲೆ

ಮೆರಿಯನ್‌ಳ ವೈಜ್ಞಾನಿಕ ಅಧ್ಯಯನದಷ್ಟೇ ಪರಿಣಾಮಕಾರಿಯಾದುದು ಆಕೆಯ ಚಿತ್ರಕಲೆ. ಚಿತ್ರಗಳು ವೈಜ್ಞಾನಿಕವಾಗಿ ನಿಖರವಾಗಿದ್ದುದಷ್ಟೇ ಅಲ್ಲದೆ ಪ್ರಾಕೃತಿಕ ಸೌಂದರ್ಯ, ಸಂಕೀರ್ಣತೆಯನ್ನು ಆಕರ್ಷಕವಾಗಿ ಬಿಂಬಿಸುತ್ತಿದ್ದವು.




**1997ರಲ್ಲಿ ಅಮೆರಿಕ ಬಿಡುಗಡೆ ಮಾಡಿದ ಮೆರಿಯನ್ನಳ ಕಲೆಯ ಅಂಚೆಚೀಟಿ.**

ಜರ್ಮನಿ ಯೂರೊ ಕರೆನ್ಸಿಗೆ ಬದಲಾಗುವ ಮೊದಲು 1991ರಲ್ಲಿ ತನ್ನ 500 ಡಚ್ ಮಾರ್ಕ್ ನೋಟಿನ ಮೇಲೆ ಮೆರಿಯನ್‌ಳ ಚಿತ್ರವನ್ನು ಹಾಗೂ 1987ರಲ್ಲಿ ಆಕೆಯ ಭಾವಚಿತ್ರವಿರುವ ಅಂಚೆಚೀಟಿಯನ್ನು ಮುದ್ರಿಸಿ ಗೌರವಿಸಿತು. ಸುರಿನಾಮೆ 1983ರಲ್ಲಿ ಹಾಗೂ ಅಮೆರಿಕ 1997ರಲ್ಲಿ ಆಕೆಯ ಚಿತ್ರಗಳ ಅಂಚೆಚೀಟಿಗಳನ್ನು ಮುದ್ರಿಸಿತು. ಇಂದು ಮೆರಿಯಾ ಸಿಬಿಲ್ಲಾ ಮೆರಿಯನ್ ಸಾಧನೆ ಹಾಗೂ ಬದುಕಿನ ಕುರಿತಂತೆ ಹಲವಾರು ಕೃತಿಗಳು ಪ್ರಕಟವಾಗಿವೆ ಹಾಗೂ ಪ್ರಕಟವಾಗುತ್ತಿವೆ. ಆಕೆಯನ್ನು ಅದ್ವಿತೀಯ ಮಹಿಳಾ ವಿಜ್ಞಾನಿಗಳ ಪಟ್ಟಿಗೆ ಸೇರಿಸಲಾಗಿದೆ.

ಹಲವಾರು ಕೀಟ ಹಾಗೂ ಜೇಡಗಳಿಗೆ ಆಕೆಯ ಹೆಸರನ್ನು ಇಡಲಾಗಿದೆ. ಇಂದಿನವರೆಗೆ ಮೂರು ಚಿಟ್ಟೆಯ, ಒಂದು ಪತಂಗದ, ಇನ್ನಿತರ ಮೂರು ಕೀಟಗಳ, ಎರಡು ಜೇಡಗಳ, ಒಂದು ಹಲ್ಲಿಯ, ಒಂದು ಪಕ್ಷಿಯ, ಒಂದು ಸಸ್ಯ ಹಾಗೂ ಮತ್ತೊಂದು ಸಸ್ಯ ವರ್ಗಕ್ಕೆ ಮೆರಿಯನ್ನಳ ಹೆಸರನ್ನು ಇಡಲಾಗಿದೆ. ವಿವಾದ ಉಂಟು ಮಾಡಿದ ಪಕ್ಷಿ ತಿನ್ನುವ ಜೇಡದ ಚಿತ್ರದಲ್ಲಿನ ಜೇಡಕ್ಕೆ ಆಕೆಯ ಹೆಸರನ್ನು ಇಡಲಾಗಿದೆ.

1715ರಲ್ಲಿ ಪಾರ್ಶ್ವವಾಯುವಿನಿಂದಾಗಿ ಮೆರಿಯನ್ನಳ ಎಡಭಾಗ ನಿತ್ರಾಣವಾಯಿತು. ಒಂದು ಕೈನಿಂದಲೇ 1717ರವರೆಗೂ ಚಿತ್ರಕಲೆಯನ್ನು ಮುಂದುವರಿಸಿದಳು. 13ನೇ ಜನವರಿ 1717ರಂದು ಮೆರಿಯನ್ ಕೊನೆಯುಸಿರೆಳೆದಳು. ಆಕೆಯ ಮಗಳಾದ ಡೊರೊಥಿಯ ತನ್ನ ತಾಯಿಯ ಮರಣಾನಂತರ ಆಕೆಯ ಕೊನೆಯ ಕೃತಿ ‘ಕಂಬಳಿಹುಳಗಳ ಹುಟ್ಟು, ಅವುಗಳ ಆಹಾರ ಹಾಗೂ ರೂಪಾಂತರವೆಂಬ ವಿರೋಧಾಭಾಸ’ (**Erucarum Ortus Alimentum et Paradoxa Metamorphosis**) ಪ್ರಕಟಿಸಿದಳು. ಆಕೆಯ ಸಾವಿಗೆ ಮೊದಲು ರಷ್ಯಾದ ಸಾಮ್ರಾಟ ಪೀಟರ್ ದ ಗ್ರೇಟ್ ಆಕೆಯ ಚಿತ್ರಗಳನ್ನು ನೋಡಿದ್ದನಂತೆ. ಆಕೆಯ ಮರಣಾನಂತರ ಕೆಲವನ್ನು ಆತ ಖರೀದಿಸಿದ್ದು ಅವು ಈಗಲೂ ಸೇಂಟ್ ಪೀಟರ್ಸ್‌ಬರ್ಗ್‌ನಲ್ಲಿವೆ. ಮೆರಿಯನ್ ತನ್ನ ಸಾವಿನ ಸಮಯದಲ್ಲಿ ಬಡತನದಲ್ಲಿದ್ದಳೆಂದು ಹೇಳಲಾಗುತ್ತದೆ ಹಾಗೂ ಅಂಥವರನ್ನು ಅಲ್ಲಿನ ಆಗಿನ ಅಭ್ಯಾಸದಂತೆ ‘ಬಡಜನರ ಸ್ಮಶಾನ’ದಲ್ಲಿ (ಪಾಪರ್ಸ್ ಗ್ರೇವ್) ಹೂಳಲಾಗಿದೆ.

**ಪ್ರತಿಕ್ರಿಯಿಸಿ: feedback@sudha.co.in**